ಕರ್ನಾಟಕ ವಿಧಾನ ಸಭೆ

ಮಂಗಳವಾರ ೬ನೇ ಮಾರ್ಚ್ ೧೯೮೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭಾಂಗಣದಲ್ಲಿ ಸಭೆಯು ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ
(ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಡಾ॥ ರಾಜಕುಮಾರ್‌ರವರ ಮೇಲೆ ಉದಕ ಮಂಡಲದಲ್ಲಿ ನಡೆದಿರತಕ್ಕ ಹಲ್ಲೆಯ ಬಗ್ಗೆ

(ಕ್ವಾಂತಿರಂಗದ ಸದಸ್ಯರುಗಳಾದ ಸರ್ವ ಶ್ರೀ ಎಂ. ರಾಮಪ್ಪ, ಬಿ. ಸ್ವಾಮಿರಾವ್, ಕೆ. ಶಿವಮೂರ್ತಿ ಜಿ. ಎಂ. ಕಾನಾಡೆ ಮತ್ತು ಆರ್. ಎನ್. ನಾಯಕ್ ಇವರು ಅಧ್ಯಕ್ಷಪೀಠದ ಮುಂಭಾಗದಲ್ಲಿ ಧರಣಿ ಕುಳಿತ್ತಿದ್ದರು.)

ಶ್ರೀ ಬಿ. ಸ್ವಾಮಿರಾವ್.— ನಮಗೆ ನ್ಯಾಯ ದೊರಕಿಸಿ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ..... ...

ಅಧ್ಯಕ್ಷರು.—ಪ್ರಶ್ನೋತರವೇಳೆ ಮುಂಗಿಯಲಿ. ತಾವು ಹಿರಿಯ ಸದಸ್ಯರಿದ್ದೀರಿ ತಮಗೆ ನಾನು ಏನು ಹೇಳಬೇಕು ?

SRI K. G. MAHESWRAPPA.—Can they hold the House for all time like this? What is this?

ಶ್ರೀ ಎಸ್. ಬಂಗಾರಪ್ಪ.—ಸದನದ ಕಲಾಪಗಳು ವ್ಯವಸ್ಥಿತವಾಗಿ ನಡೆಯಬೇಕೆನ್ನುವ ಆಸೆ ನಮಗೂ ಕೂಡ ಹೆಚ್ಚಾಗಿ ಇದೆ. ನಿನ್ನೆ ನಮ್ಮ ಭಾಗದ ಮತಿಯಿಂದ ಧರಣಿ ಮಾಡತಕ್ಕ ಸಂದರ್ಭದಲ್ಲಿ ತಾವು ಸಭೆಯನ್ನು ಹತ್ತಾತ್ತನೆ ಮುಂದೂಡಿದ್ದೀರಿ. ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇವೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಎಂ.ಜಿ. ರಾಮಚಂದ್ರನ್‌ರವರು ಉದಕಮಂಡಲದಲ್ಲಿ ಡಾ॥ ರಾಜ್‌ಕುಮಾರ್‌ರವರ ಮೇಲೆ ನಡೆದಂಥ ಹಲ್ಲೆಯ ಬಗ್ಗೆ ನ್ಯಾಯಾಂಗ ತನಿಖೆ ಮಾಡಲು ಒಪ್ಪಿಕೊಂಡಿದ್ದಾರೆನ್ನುವ ಭರವಸೆಯನ್ನು ಕೊಟ್ಟರು. ನಾವು ನಮ್ಮ ಪಾದಪದ್ಮವನ್ನು ಮಂಡನೆ ಮಾಡಿ ಅಲ್ಲಿ ಸಂಚು ನಡೆದಿದೆ ಎನ್ನುವ ಮಾತನ್ನು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಮಾಡಲು ತಮಿಳು ನಾಡಿನ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ ಎಂದು ಹೇಳಿದ್ದಾರೆ ಅದು ತಮ್ಮ ಗಮನಕ್ಕೂ ಬಂದಿದೆ. ಆದರೆ ಈ ದಿನ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ, ತಮಿಳುನಾಡಿನ ಶಾಸನ ಸಭೆಯಲ್ಲಿ ವಾರ್ತಾಮಂತ್ರಿಗಳಾದ ವೀರಪ್ಪನ್ ಅವರು ಡಾ॥ ರಾಜಕುಮಾರ್ ಮೇಲೆ ನಡೆದಿರತಕ್ಕ ಹಲ್ಲೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆಯೆ ವಿನಹ. ನಮ್ಮ ಮುಖ್ಯಮಂತ್ರಿಗಳು ಹೇಳಿದಹಾಗೆ ನ್ಯಾಯಾಂಗ ತನಿಖೆಮಾಡಲು ನಾವು ಒಪ್ಪಿದ್ದೇವೆ ಎನ್ನುವ ಹೇಳಿಕೆಯನ್ನು ಅವರು

ಕೊಟ್ಟಲ್ಲ. ಅಂದಮೇಲೆ ಊಟಿಯಲ್ಲಿ ನಡೆದಂತಹ ಹಲ್ಲೆಯ ಬಗ್ಗೆ ತಮಿಳುನಾಡು ಸರ್ಕಾರ ನ್ಯಾಯಾಂಗ ತನಿಖೆ ಮಾಡಲು ಸಿದ್ಧವಾಗಿಲ್ಲ ಎನ್ನುವುದು ಆವರು ವಿಷಾದ ವ್ಯಕ್ತಪಡಿಸಿರುವುದರಿಂದಲೇ ಗೊತ್ತಾಗುತ್ತದೆ. ಆವರು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಪ್ರಕಟ ಮಾಡಿಲ್ಲ. ತಮಿಳುನಾಡು ಸರ್ಕಾರದವರು ಪ್ರಕಟ ಮಾಡಿದ್ದರೆ, ನ್ಯಾಯಾಂಗ ತನಿಖೆ ಮಾಡುತ್ತಾರೆನ್ನುವ ಭಾವನೆಗೆ ನಾವು ಬರಬಹುದಾಗಿತ್ತು. ಆದರೆ ಈ ವಿಚಾರದ ಬಗ್ಗೆ ಒಂದೇ ಒಂದು ಪ್ರಸ್ತಾಪ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ, ಪ್ರಕರಣ ನಡೆದಿರತಕ್ಕಂಥ ವಿಚಾರದಲ್ಲಿ ಅಲ್ಲಿಯೂ ಕೂಡ ನ್ಯಾಯ ದೊರೆಯುತ್ತಿಲ್ಲ. ನ್ಯಾಯಾಂಗ ತನಿಖೆ ವಿಚಾರದಲ್ಲಿ ಅಲ್ಲಿಯ ಶಾಸನಸಭೆ ಒಪ್ಪಿದೆ ಎಂಬ ಉದ್ದೇಶದಿಂದ ನಾವೆಲ್ಲರೂ ಕೂಡ ಭಾವನೆ ಇಟ್ಟುಕೊಂಡಿದ್ದೆವು. ಇದು ಅಲ್ಲಿಯೂ ಇಲ್ಲ ಇಲ್ಲಿಯೂ ಇಲ್ಲ. ಆದಮೇಲೆ ಕರ್ನಾಟಕ ಸರ್ಕಾರದ ಜವಾಬ್ದಾರಿ ಏನು ಎನ್ನತಕ್ಕಂತಹ ಪ್ರಶ್ನೆ ನಮಗೆ ಬರುತ್ತದೆ. ಆದ್ದರಿಂದ ನಾನು ಸಭಾಧ್ಯಕ್ಷರಲ್ಲಿ ಕೇಳುವುದೇನೆಂದರೆ ಈ ಸರ್ಕಾರದ ಸ್ಪಷ್ಟವಾದ ನಿಲುವು ವಿಚಾರದಲ್ಲಿ ಏನ್ನುವುದು ಒಂದುಮೇಳೆ ಆ ಕರ್ನಾಟಕ ಸರ್ಕಾರದಲ್ಲಿನ ಮುಖ್ಯ ಮಂತ್ರಿ ಶ್ರೀ ಎಂ. ಜಿ. ರಾಮಚಂದ್ರನ್ ಇವರು ಹೇಳಿದ ರೀತಿ ಹೇಳದ್ದಾರೋ ಇಲ್ಲವೋ ನಂತ್ರೊಮ್ಮೆ ಅವರೊಡನೆ ಮಾತುಕತೆಯನ್ನು ಇಲ್ಲಿನ ಮುಖ್ಯಮಂತ್ರಿಗಳು ಮಾಡಿದ್ದಾರೆಯೇ ಏನ್ನುವುದನ್ನು ಹೇಳಬೇಕು. ನಾವು ಏನು ಬೇಡಿಕೆಯನ್ನು ಇಟ್ಟು ಒತ್ತಾಯಿಸುತ್ತಿದ್ದೇವೆ ಈ ಸಂಚಿನ ವಿಚಾರದಲ್ಲಿ, ನ್ಯಾಯಾಂಗ ತನಿಖೆ ಆಗಬೇಕೆಂಬ ವಿಚಾರದಲ್ಲಿ, ಇದರ ಬಗ್ಗೆಯೂ ಕೂಡ ಅವರು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಒತ್ತಾಯಪಡಿಸುತ್ತಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಮುಗಿದಮೇಲೆ ಯಾವುದೇ ವಿಚಾರ ಇದ್ದರೂ ಅದನ್ನು ಪ್ರಸ್ತಾಪ ಮಾಡತಕ್ಕದ್ದು. ಈ ಸದನದ ಒಂದು ಸಹಜವಾದ ಸಂಪ್ರದಾಯ. ಪ್ರಶ್ನೋತ್ತರ ಮುಗಿಯದೆ ಮುಂದೆ ಹೋಗತಕ್ಕಂಥ ಸಂದರ್ಭ ಇಲ್ಲವೆಂದು ನೀವು ಒಪ್ಪಿದ್ದೀರಿ ಎಂದು ನಾನು ಭಾವನೆ ಮಾಡಿದ್ದೇನೆ. I only appeal to the hon. Members to resume their seats. ಪ್ರಶ್ನೋತ್ತರ ಮೊದಲು ಮುಗಿಯಲಿ. ಆಮೇಲೆ ಆಲೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—Whether it is 334 or a matter under rule 59, they have to be taken up after the question hour, but ತಮಗೆ ಗೊತ್ತಿರುವ ಹಾಗೆ ನಾವು ನಮ್ಮ ಪಕ್ಷದಸತಿಯಿಂದ ನೆನ್ನೆ ಈ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟು ಒತ್ತಾಯಿಸತಕ್ಕಂಥ ದಿನೆಯಲ್ಲಿ ತಮ್ಮ ವಿರುದ್ಧವಾಗಿ ಯಾವುದೇ ಕಲಾಪಕ್ಕೆ ಅಡ್ಡಿ ಬರಬೇಕೆಂದು ಅಲ್ಲ. ಧರಣಿ ಸತ್ಯಾಗ್ರಹವನ್ನು ನಿನ್ನೆ ಪ್ರಾರಂಭ ಮಾಡಿದ್ದರಿಂದ ಪ್ರಶ್ನೋತ್ತರ ಮುಗಿದ ಮೇಲೆ, we cannot give break up to this. ಎನ್ನುವ ಒಂದು ಉದ್ದೇಶದಿಂದ ಧರಣಿಯನ್ನು ಮುಂದುವರಿಸುತ್ತಿದ್ದೇವೆ. ನಿನ್ನೆಯ ಸಂಜೆ ನೀವು ಪತತ್ತಾನೆ ಸಭೆಯನ್ನು ಮುಂದೂಡಿದ್ದರಿಂದ ನಾವು ಧರಣಿಯನ್ನು ಮುಂದುವರೆಸಬೇಕಾಯಿತು ಎನ್ನುವ ಸರಕಾರವನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತಿದ್ದೇನೆ, ಯಾವ ಸದುದ್ದೇಶದಿಂದ ನಾವು ಧರಣಿಯನ್ನು ಪ್ರಾರಂಭ ಮಾಡಿದ್ದೇವೆ ಎಂಬ ಅಂಶವನ್ನು ತಾವು ಗಮನಿಸಬೇಕೆಂಬ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಸಭೆಯ ಕಲಾಪಗಳು ಮೊದಲು ಪ್ರಾರಂಭವಾಗಲಿ. ಇಂತಹ ವಿಚಾರಗಳನ್ನು ಪ್ರಸಾಪ ಮಾಡುವುದಕ್ಕೆ ನಿಮಗೆ ಪದೇಪದೇ ಹೇಳತಕ್ಕದ್ದು ಅವಶ್ಯಕತೆ ಇಲ್ಲ. ಸದನದ ಅಶ್ಯಂತ ಹಿರಿಯ ಸದಸ್ಯರಲ್ಲಿ ನೀವು ಒಬ್ಬರಿದ್ದೀರಿ. ಪ್ರಶ್ನೋತ್ತರ ಮುಗಿದ ತಕ್ಷಣ ಈ ವಿಷಯವನ್ನು ತೆಗೆದುಕೊಳ್ಳುವ ಆಲೋಚನೆ ಮಾಡೋಣ. ಪ್ರಶ್ನೋತ್ತರ ನಡೆಯದ ಹಾಗೆ ಸಭೆಯನ್ನು ಈ ರೀತಿ ಆರಂಭ ಮಾಡತಕ್ಕದ್ದು ಸರಿಯಲ್ಲ.

ಶ್ರೀ ಪಿ. ರಾಮನೆವ್.—ಸ್ವಾಮಿ, ನನ್ನದೊಂದು ಕ್ರಿಯಾಲೋಪ ಇದೆ. ಪ್ರಶ್ನೋತ್ತರದ ಬಗ್ಗೆ ಸದನದ ಪ್ರತಿಯೊಬ್ಬ ಸದಸ್ಯನಿಗೂ ಹಕ್ಕು ಇರುತ್ತದೆ. ದಯವಾಯಿ ನಮ್ಮ ಹಕ್ಕನ್ನು ಚಲಾಯಿಸತಕ್ಕ ಅವಕಾಶ ಕೊಡಿ. ಹತ್ತಾರು ದಿವಸಗಳಿಂದ ನಾವು ಪ್ರಶ್ನೆ ಬರುವುದನ್ನು ಕಾದಿದ್ದು. ಅದು ಈಗ ಬಂದಿರುವ ಸಂದರ್ಭದಲ್ಲಿ ಅದನ್ನು ನಾಲ್ಕೈದು ಸದಸ್ಯರು ನಿಲ್ಲಿಸುವುದು ಕ್ರಮಬದ್ಧವಾಗಿದೆಯೇ ?ಇದರಿಂದ ನಮ್ಮ ಪಕ್ಷನ್ನು ಮೊಟಕುಗೊಳಿಸಿದಂತಾಗುವುದಿಲ್ಲವೆ ? ಆಮೇಲೆ ಏನು ಬೇಕಾದರೂ ಮಾಡೋಣ. ನಮ್ಮ ಹಕ್ಕನ್ನು ತಾವು ಕಾಪಾಡಬೇಕು.

(ಧರಣಿ ಕುಳಿತ್ತಿದ್ದ ಸದಸ್ಯರು ''ರಾಜಕುಮಾರ್ ಮೇಲೆ ಹಲ್ಲೆ ತನಿಖೆಯಾಗಲಿ'' ಎಂದು ಕೂಗಿದರು)

ಶ್ರೀ ಪಿ. ರಾಮದೇವ್.—ಪ್ರಶ್ನೆ ಹಾಕಿರುವವರು ನಾನೇನು ತಪ್ಪು ಮಾಡಿದ್ದೇನೆ ? ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಏನು ಬೇಕಾದರೂ ಮಾಡಿಕೊಳ್ಳಿಣ. ಆದರೆ ಈ ಸಭೆಯ ಸದಸ್ಯರ ಹಕ್ಕನ್ನು ನಾಲ್ಕೈದು ಸದಸ್ಯರು ಹೀಗೆ ಮೊಟಕು ಮಾಡುವುದು ಸರಿಯಲ್ಲ. ಆದ್ದರಿಂದ ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಸದಸ್ಯರೊಬ್ಬರು ನಿನ್ನೆಯ ದಿವಸ ಅಧ್ಯಕ್ಷರ ಪೀಠಕ್ಕೆ ಅಪಮಾನ ಮಾಡಿ ಮೈಕ್‌ನ್ನು ಕಿತ್ತೆಸೆದಿದ್ದು ಆದು ಕಾರ್ಯದರ್ಶಿಯವರ ಮೇಲೆ ಬೀಳುತಕ್ಕ ಪರಿಸ್ಥಿತಿ ಇತ್ತು. ಅಂತಹ ಘಟನೆಯ ಬಗ್ಗೆ ಅವರು ವಿಷಾದವನ್ನೂ ಸಹ ವ್ಯಕ್ತಪಡಿಸಿಲ್ಲ, ಅವರು ಈ ತರಹ ಹಠ ಹಿಡಿಯುವುದು ಸರಿಯಲ್ಲ. ಮಾನ್ಯ ಬಂಗಾರಪ್ಪನವರು ಆ ಸದಸ್ಯರ ಅನಾಗರೀಕ ವರ್ತನೆ ಬಗ್ಗೆ ವಿಷಾದ ವ್ಯಕ್ತಪಡಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಮೇಲೆ ಸಂಜೆಸ ಆಪಾದನೆ ಇದ್ದಾಗ ಅವರೇ ವಿಷಾದ ವ್ಯಕ್ತಪಡಿಸಬೇಕೆನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಕಾರಣಕರ್ತರು ಸರ್ಕಾರದವರು....

ಅಧ್ಯಕ್ಷರು.—ರಾಮದೇವ್ ಅವರು ಮುಖ್ಯವಾದಂಥ ವಿಧಿನಿಯಮವನ್ನು ತಂದಿದ್ದಾರೆ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅದು ನಮಗೂ ಕೂಡ ಅರ್ಥವಾಗುತ್ತದೆ.

(ಸಭೆಯಲ್ಲಿ ಗೊಂದಲ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಉಪಕ್ರಮಿಸಿದರು)

ಅಧ್ಯಕ್ಷರು.—ದಯವಿಟ್ಟು ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ನಾನು ಪುನಃ ಪುನಃ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರಾದ ರಾಮದೇವ್ ಅವರು ಹೇಳಿದ ಹಾಗೆ ಇದು ಅನೇಕ ಜನ ಸದಸ್ಯರು ಅನೇಕ ದಿವಸಗಳಕಾಲ ಬಹಳ ಹಿಂದೆ ಕಳುಹಿಸಿದಂಥ ಪ್ರಶ್ನೆಗಳಿಗೆ ಉತ್ತರಕೊಡುವುದು ಸಭೆಯ ಕಾರ್ಯ ಕಲಾಪಗಳ ಅತ್ಯಂತ ಮುಖ್ಯವಾದ ಭಾಗ. ಇದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಾವಿಸುತ್ತೇನೆ. ಈ ಸದಸ್ಯರ ಹಕ್ಕನ್ನು ನಾವು ಮೊಟಕು ಮಾಡಬಾರದೆಂದು ಅವರು ಹೇಳಿದ್ದಾರೆ. ಇದನ್ನು ತಾವು ಒಪ್ಪುತ್ತೀರೆಂದು ನಾನು ಹೊಸದಾಗಿ ಹೇಳಬೇಕಾದುದು ಇಲ್ಲ. ನಾನು ಎಲ್ಲಾ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ದಯವಾಡಿ ಎಲ್ಲಾ ಸದಸ್ಯರು ತಮ್ಮ ತಮ್ಮ ಜಾಗಗಳಿಗೆ ಹೋಗಿ. ಮೊದಲು ಪ್ರಶ್ನೋತ್ತರ ಮುಗಿಯಲಿ. ಉಳಿದ ವಿಚಾರಗಳಿನ್ನೆ ಇದ್ದರೂ ಆ ಮೇಲೆ ತೆಗೆದುಕೊಳ್ಳಿಣ. ನಿಮ್ಮ ಹಕ್ಕನ್ನು ಮೊಟಕು ಮಾಡುವುದಕ್ಕೆ ನಾನೆಂದೂ ಅವಕಾಶ ಕೊಡುವುದಿಲ್ಲ. ಈ ವಿಶ್ವಾಸ ನಿಮಗೆ ಇದ್ದರೆ ದಯವಾಡಿ ತಮ್ಮ ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ. I only appeal to you all, please resume your seats. Let us take it up after the question hour is over.

ಶ್ರೀ ಎಸ್. ಬಂಗಾರಪ್ಪ.—(Interruptions) ನೀವು ಹೇಳತಕ್ಕ ಅಭಿಪ್ರಾಯ ನಮಗೆ ಗೊತ್ತಿದೆ. ಮಾನ್ಯ ಸದಸ್ಯರಾದ ರಾಮದೇವ್ ಅವರು ಕ್ರಿಯಾಲೋಪದ ಮೂಲಕ ಎತ್ತಿದಂಥ ಸದಸ್ಯರ ಹಕ್ಕಿನ ಬಗ್ಗೆ ನಮಗೆ ಆರ್ಥವಾಗಿದೆ. ಪ್ರಶ್ನೋತ್ತರ ವೇಳೆಯನ್ನು ಹಾಳು ಮಾಡತಕ್ಕ ಉದ್ದೇಶ ನಮಗೆ ಎಳ್ಳಷ್ಟು ಇಲ್ಲ. ಸಭೆಯ ಕಾರ್ಯಕಲಾಪಗಳಲ್ಲಿ ೧೧ ಗಂಟೆಗೆ ಪ್ರಶ್ನೋತರ ಇದ್ದರೆ ಅದನ್ನು ೧೨ ಗಂಟೆಗೆ ಬೇರೆ ಕಲಾಪಗಳು ಮುಗಿದಮೆ ಲೆ ಇಲ್ಲಿ ತೆಗೆದುಕೊಂಡಿದ್ದು ಇದೆ. ಪ್ರಶ್ನೋತ್ತರ ಅನೇಕ ದಿವಸಗಳಿಂದ ಬಂದಿರತಕ್ಕದ್ದು. ಇದರ ಬಗ್ಗೆ ಸದಸ್ಯರ ಹಕ್ಕಿಗೆ ನಾವು ಸ್ವಲ್ಪ ಕೂಡ ಅಡ್ಡಿ ಬರುವುದಿಲ್ಲ. ಆದರೆ ಈ ಸಂದರ್ಭದಲ್ಲಿ ನಮಗಿರುವ ಹಕ್ಕನ್ನು ತಾವು ದಯವಾಡಿ ಅರ್ಥ ಮಾಡಿಕೊಳ್ಳಬೇಕು ಎನ್ನುವ ವಿನಂತಿಯನ್ನು ಸಭಾಧ್ಯಕ್ಷರ ಮೂಲಕ ಮಾಡುತ್ತೇನೆ.

(ಸಭೆಯಲ್ಲಿ ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಸಭಾಧ್ಯಕ್ಷರೇ, ತಾವು ಹೇಳತಕ್ಕ ಅಭಿಪ್ರಾಯ ನಮಗೆ ಗೊತ್ತಾಗಿದೆ. ನಾನು ವಿನಂತಿ ಮಾಡಿಕೊಳ್ಳುವುದು ನಮಗೆ ಇರತಕ್ಕಂಥ ಹಕ್ಕನ್ನು, ಸತ್ಯವಾಗಿ ಇರತಕ್ಕ ವಿಷಯವನ್ನು, ಪ್ರತಿಪಾದನೆ ಮಾಡತಕ್ಕ ವಿಷಯದಲ್ಲಿ ಮಾನ್ಯ ಸದಸ್ಯರು ನಮಗೆ ಇರುವ

ಹಕ್ಕನ್ನು ಗಮನಿಸಬೇಕು, ನಮಗೆ ರಕ್ಷಣೆ ಕೊಡುವ ದೃಷ್ಟಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ರಕ್ಷಣೆ ಕೊಡುವುದಕ್ಕೆ ಅವಕಾಶ ಕೊಡಿ ಎಂದು ನಾನು ಕೇಳುವುದು. ಒಟ್ಟು ಸದಸ್ಯರ ಹಕ್ಕನ್ನು ಮೊಟಕು ಮಾಡದೆ ತಮ್ಮ ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕೆಲವು ಜನ ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿರಬಹುದು. ಹಿಂದೆ ಕೂಡ ಧರಣಿ ಸತ್ಯಾಗ್ರಹ ನಡೆದ ಕಾಲದಲ್ಲಿ ಪ್ರಶ್ನೋತ್ತರ ಕಾಲ ಎರಡು ಮೂರು ದಿನ ಮುಂದೂಡಿರತಕ್ಕದ್ದು ಇದೆ. ಮಾನ್ಯ ವಿರೇಂದ್ರಪಾಟೀಲರ ಸರ್ಕಾರ ಇದ್ದಾಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆರ್ಥ ಸಚಿವರಾಗಿದ್ದರು.

ಶ್ರೀ ಪಿ. ರಾಮದೇವ್.—ಹಿಂದೆ ಆಗಿರುವುದನ್ನು ಈಗ ನಾವು ಮಾಡಬೇಕೆಂದು ಇದೆಯೇ ?

ಶ್ರೀ ಎಸ್. ಬಂಗಾರಪ್ಪ.—೬೨ನೇ ಇಸವಿಯಲ್ಲಿ ಮಾನ್ಯ ಬೊಮ್ಮಾಯಿಯವರೂ ಕೂಡ ಧರಣಿ ಕುಳಿತಿದ್ದ ನೆನಪು. ಮೂರು ದಿವಸಗಳ ಕಾಲ ಪ್ರಶ್ನೋತ್ತರ ಇಲ್ಲದೇ ಸಭೆ ನಡೆಯಿತು. ಈಗ ಅವರು ಸಚಿವರಾಗಿದ್ದಾರೆ. ಆದ್ದರಿಂದ ದಯವಾಡಿ ಮಾನ್ಯ ಸಭಾಧ್ಯಕ್ಷರು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಅವರು ನ್ಯಾಯಾಂಗ ತನಿಖೆಗೆ ತಯಾರಿದ್ದೇವೆ ಎಂದು ಪ್ರಕಟಮಾಡಲಿ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಕೆಲಸ ಬೇಡ.

ಶ್ರೀ ಪಿ. ರಾಮದೇವ್.—ದಯವಾಡಿ ಒಂದು ಗಂಟೆಯ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಇದನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಮೊದಲಿಗೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ತಾವು ಸಹಕರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವು ಈ ಒಂದು ನಿಲುವನ್ನು ತೆಗೆದು ಕೊಂಡಿರುವುದರಿಂದ ಮತ್ತು ಸರ್ಕಾರವು ಕೂಡಾ ತನ್ನ ಹಠಮಾರಿತನವನ್ನು ಮುಂದುವರಿಸಿರುವುದರಿಂದ ನಾವು ಈ ಸಭೆಯ ಮಾನ್ಯ ಸದಸ್ಯರ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ನಾವುಗಳು ಸಭಾತ್ಯಾಗ ಮಾಡಬೇಕೆಂದಿದ್ದೇವೆ. ನಮ್ಮ ಪಾಪ ಇಷ್ಟು ಮಾತ್ರ ಇದೆ. ಏನೆಂದರೆ ಈ ಸರ್ಕಾರದವರು ಈ ಒಂದು ಒಳಸಂಚಿನಲ್ಲಿ ಪಾಲುದಾರರಾಗಿರುವುದರಿಂದ ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಆದರೆ ಇದಕ್ಕೆ ಸರ್ಕಾರದವರು ಒಪ್ಪುತ್ತಿಲ್ಲ. ಈ ಸರ್ಕಾರದ ಈ ಧೋರಣೆಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತೇವೆ. ಆದರೆ ನಮ್ಮ ಧೋರಣೆಯನ್ನು ಮಾತ್ರ ಮುಂದುವರಿಸುತ್ತೇವೆ. ಶ್ರೀ ಪಿ. ರಾಂದೇವ್ ಅವರು ಹೇಳಿದಂಥ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ. ಆದರೆ ಸರ್ಕಾರದ ಈ ಕೆಟ್ಟ ಧೋರಣೆ ಹಾಗೂ, ಕೆಟ್ಟ ನಿಲುವನ್ನು ನಾವು ವಿರೋಧ ಮಾಡಿ ನಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಹೋಗುವವರು ಖಾಯಂ ಆಗಿ ಹೋದರೆ ಈ ಸಭೆಯ ಕಾರ್ಯಕಲಾಪಗಳಿಗೆ ಅನುಕೂಲವಾಗುತ್ತದೆ. ಹಾಗೂ ಈ ರಾಜ್ಯಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ.

ಶ್ರೀ ಎಂ. ರಾಮಪ್ಪ.—ಈ ಮಾತನ್ನು ಹೇಳಲು ನಿಮಗೇನು ಅಧಿಕಾರ ಇದೆ?

(ಗೊಂದಲ)

(ಕ್ರಾಂತಿರಂಗದ ಸದಸ್ಯರುಗಳು ಮತ್ತು ಪಕ್ಷೇತರ ಸದಸ್ಯರಾದ ಶ್ರೀ ಜಿ. ನಾರಾಯಣ ಕುಮಾರ್ ಅವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು. ಮೊದಲಿನ ಮೂರು ಪ್ರಶ್ನೆಗಳನ್ನು ಅನಂತರ ತೆಗೆದುಕೊಳ್ಳುತ್ತೇನೆ. ಈಗ ೪೫ನೇ ಪ್ರಶ್ನೆಯನ್ನು ಶ್ರೀ ವಿ. ರುಕ್ಮಯ್ಯ ಪೂಜಾರಿ ಅವರು ಕೇಳಬಹುದು.